# ‘ಶ್ರೀರಾಮಕೃಷ್ಣ ವಚನವೇದ’

# ಭಾವಧಾರೆ - 45

**ಸ್ವಾಮಿ ನಿತ್ಯಸ್ಥಾನಂದ**



ಕಲೆ: ಸ್ವಾಮಿ ನಂದಾತ್ಮಜಾನಂದ

## ಪ್ರಜ್ಞಾಪ್ರಸಾದ

**ಶ್ರೀರಾಮಕೃಷ್ಣರು:** ‘‘ಅನೇಕರು ಬ್ರಹ್ಮಜ್ಞಾನದ ವಿಷಯವಾಗಿ ಮಾತಾಡುತ್ತಾರೆ. ಆದರೆ ಅವರ ಮನಸ್ಸು ಪ್ರಾಪಂಚಿಕ ವಸ್ತುಗಳ ಕಡೆಗೆ–ಮನೆ, ಮಠ, ಹಣ, ಕೀರ್ತಿ, ಇಂದ್ರಿಯ ಸುಖ ಇವುಗಳ ಕಡೆಗೆ ಹರಿದು ಹೋಗಿರುತ್ತದೆ. ಸ್ಮಾರಕ ಸ್ತಂಭದ (ಕಲ್ಕತ್ತದಲ್ಲಿರುವ ಅಕ್ಟರ್‌ಲೋನಿ ಮಾನ್ಯುಮೆಂಟ್) ಕೆಳಗಡೆ ನಿಂತಿರುವವರೆಗೆ ಗಾಡಿ, ಕುದುರೆ, ಆಂಗ್ಲ ಪುರುಷರು, ಮಹಿಳೆಯರು ಇತ್ಯಾದಿಗಳನ್ನು ನೋಡಬಹುದು. ಆದರೆ ಅದರ ಮೇಲಕ್ಕೆ ಹತ್ತಿದರೆ ಆಗ ಕಾಣುತ್ತದೆ ಆಕಾಶ ಮತ್ತು ಸಮುದ್ರ ಸುಮ್ಮನೆ ವಿಶಾಲವಾಗಿ ಹಬ್ಬಿಕೊಂಡಿರುವುದು. ಆಗ ಮನೆ, ಕುದುರೆ ಗಾಡಿ, ಮನುಷ್ಯರು ಇವು ಯಾವುವೂ ಕಾಣಿಸವು. ಅವೆಲ್ಲ ಇರುವೆಗಳ ಹಾಗೆ ಕಾಣುತ್ತವೆ.’’ *(ಶ್ರೀರಾಮಕೃಷ್ಣ ವಚನವೇದ, ಭಾಗ ೧, ಪು. ೧೩೮-೩೯)*

ಶ್ರೀರಾಮಕೃಷ್ಣರ ಮೇಲಿನ ಮಾತು ಒಂದು ಸಂಸ್ಕೃತ ಶ್ಲೋಕವನ್ನು ನೆನಪಿಸಿಕೊಡುತ್ತದೆ:

**ಅಧೀತ್ಯ ಚತುರೋ ವೇದಾನ್ ಧರ್ಮಶಾಸ್ತ್ರಾಣ್ಯಶೇಷತಃ ।**
**ಬ್ರಹ್ಮತತ್ತ್ವಂ ನ ಜನಾತಿ ದರ್ವೀ ಸೂಪರಸಂ ಯಥಾ ॥**

‘‘ನಾಲ್ಕು ವೇದಗಳನ್ನೂ ಎಲ್ಲ ಧರ್ಮಶಾಸ್ತ್ರಗಳನ್ನೂ ಅಧ್ಯಯನ ಮಾಡಿಯೂ, ಸೌಟು ಸಾರಿನ ರುಚಿಯನ್ನು ನೋಡದಿರುವಂತೆ, ಬ್ರಹ್ಮತತ್ತ್ವವನ್ನು ಅರಿಯದಿದ್ದರೆ ಏನು ಪ್ರಯೋಜನ?’’

ಒಬ್ಬ ಪಂಡಿತ ಪುರಾಣ ಪ್ರವಚನ ನೀಡುತ್ತಿದ್ದ, ಪ್ರತಿದಿನ. ಮುದುಕ–ಮುದುಕಿಯರು ಬಂದು ತೂಕಡಿಸುತ್ತ ಕೇಳುತ್ತಿದ್ದರು. ಪುರಾಣದಲ್ಲಿ ಒಂದು ಕಡೆ ಬದನೆಕಾಯಿ ತಿನ್ನಬಾರದೆಂದು ಹೇಳಿತ್ತು. ಅಂದು ಸಂಜೆ ಪಂಡಿತರು ಮಾರುಕಟ್ಟೆಯಲ್ಲಿ ಬದನೆಕಾಯಿ ಕೊಂಡುಕೊಳ್ಳುತ್ತಿರುವುದನ್ನು ಮುದುಕಿಯೊಬ್ಬಳು ನೋಡಿದಳು. ‘‘ಇದೇನು ಪಂಡಿತರೆ, ಪುರಾಣದಲ್ಲಿ ಬದನೆಕಾಯಿ ತಿನ್ನಬಾರದು ಎಂದು ಹೇಳಿದೆ. ಆದರೆ ತಾವು ಅದನ್ನೇ ಕೊಂಡುಕೊಳ್ಳುತ್ತಿರುವಿರಲ್ಲ!?’’ ಪಂಡಿತರು ಮುಗುಳ್ನಗೆಯೊಂದಿಗೆ, ‘‘ಪುರಾಣ ಹೇಳುವುದಕ್ಕೆ, ಬದನೆಕಾಯಿ ತಿನ್ನುವುದಕ್ಕೆ’’ ಎಂದು ಹೇಳಿದರು.

ಸ್ಮಾರಕ ಸ್ತಂಭದ ವಿಚಾರವಾಗಿ ಶ್ರೀರಾಮಕೃಷ್ಣರು ಹೇಳುತ್ತಿದ್ದಾರೆ. ಇಲ್ಲಿ ಮಹಾಭಾರತದ ಒಂದು ಶ್ಲೋಕವನ್ನು ನೆನೆಪಿಸಿಕೊಳ್ಳಬಹುದು:

**ಪ್ರಜ್ಞಾಪ್ರಾಸಾದಮಾರುಹ್ಯ ಅಶೋಚ್ಯಃ ಶೋಚತೋ ಜನಾನ್ ।**
**ಭೂಮಿಷ್ಠಾನಿವ ಶೈಲಸ್ಥಃ ಸರ್ವಾನ್ ಪ್ರಾಜ್ಞೋಽನುಪಶ್ಯತಿ ॥**

‘‘ಆಧ್ಯಾತ್ಮಿಕ ಪ್ರಜ್ಞೆ ಎಂಬಂತಹ ಎತ್ತರದ ಪ್ರಾಸಾದವನ್ನೇರಿ ಜ್ಞಾನಿಯಾದವನು, ಬೆಟ್ಟದ ತುದಿಯಿಂದ ಕೆಳಗಿರುವವರನ್ನು ನೋಡುವಂತೆ, ತಾನು ಶೋಕಾತೀತನಾಗಿ ಎಲ್ಲ ಶೋಕಿಸುವ ಜನರನ್ನು (ಕರುಣೆಯಿಂದ) ನೋಡುತ್ತಾನೆ.’’

## ಮನೋಮಯಾಗ್ನಿ

ಶ್ರೀರಾಮಕೃಷ್ಣರು: ‘‘ಬ್ರಹ್ಮಜ್ಞಾನ ದೊರೆಯಿತು ಎಂದರೆ ಸಂಸಾರಾಸಕ್ತಿ ಕಾಮಕಾಂಚನದಲ್ಲಿ ಉತ್ಸಾಹ ಇವೆಲ್ಲ ಹೊರಟು ಹೋಗುತ್ತವೆ. ಎಲ್ಲವೂ ಶಾಂತಿಮಯವಾಗಿ ಬಿಡುತ್ತವೆ. ಸೌದೆ ಉರಿಯುವಾಗ ಅದೆ ‘ಪಟ್’ ‘ಪಟ್’ ಅಂತ ಶಬ್ದ ಮಾಡುತ್ತದೆ. ಉರಿಯನ್ನೂ ನೋಡಬಹುದು. ಆದರೆ ಅದು ಉರಿದು ಬೂದಿ ಉಳಿದುಕೊಂಡಾಗ ಯಾವ ಶಬ್ದವೂ ಇರದು. ಆಸಕ್ತಿ ಹೋಯಿತು ಎಂದರೆ ಉತ್ಸಾಹವೂ ಹೊರಟುಹೋಗುತ್ತದೆ. ಕೊನೆಗೆ ಶಾಂತಿ.’’ *(ಅಲ್ಲೇ, ಪು. ೧೩೯)*

ಶ್ರೀರಾಮಕೃಷ್ಣರು ಕೊಡುವ ಸೌದೆ-ಬೆಂಕಿಯ ಉದಾಹರಣೆ ತುಂಬ ಅರ್ಥಪೂರ್ಣವಾಗಿದೆ. 'ವಿವೇಕಚೂಡಾಮಣಿ'ಯಲ್ಲಿ ಶ್ರೀಶಂಕರಾಚಾರ್ಯರು ಇದೇ ರೀತಿಯ ಒಂದು ರೂಪಕವನ್ನು ನೀಡುತ್ತಾರೆ:

**ಪಂಚೇಂದ್ರಿಯೈಃ ಪಂಚಭಿರೇವ ಹೋತೃಭಿಃ**
**ಪ್ರಚೀಯಮಾನೋ ವಿಷಯಾಜ್ಯಧಾರಯಾ ।**
**ಜಾಜ್ವಲ್ಯಮಾನೋ ಬಹುವಾಸನೇಂಧನೈಃ**
**ಮನೋಮಯಾಗ್ನಿರ್ದಹತಿ ಪ್ರಪಂಚಮ್ ॥**

*(ವಿ. ಚೂ., ೧೭೮)*

''ಪಂಚೇಂದ್ರಿಯಗಳೆಂಬ ಪಂಚಹೋತೃಗಳು ಸುರಿಯುತ್ತಿರುವ ವಿಷಯಗಳೆಂಬ ತುಪ್ಪದ ಧಾರೆಯಿಂದ ವರ್ಧಿಸುತ್ತಿರುವ ಬಹುಬಗೆಯ ವಾಸನೆಗಳೆಂಬ ಕಟ್ಟಿಗೆಗಳಿಂದ ಪ್ರಜ್ವಲಿಸುತ್ತಿರುವ ಮನೋಮಯಕೋಶವೆಂಬ ಅಗ್ನಿಯು ಪ್ರಪಂಚ ರೂಪದಲ್ಲಿ ಉರಿಯುತ್ತಿರುವುದು.''

ವಿಷಯಾಜ್ಯವನ್ನು ಸುರಿಯುವುದು ನಿಂತಾಗ, ವಾಸನೇಂಧನವು ಸಂಪೂರ್ಣ ಸುಟ್ಟು ಹೋದಾಗ ಈ ಮನೋಮಯಾಗ್ನಿಯು ಶಾಂತವಾಗುತ್ತದೆ.

### ಪ್ರಪಂಚವೆಂಬ ಸಂತೆ

**ಶ್ರೀರಾಮಕೃಷ್ಣರು:** ''ಬ್ರಹ್ಮಜ್ಞಾನ ದೊರೆತ ನಂತರ, ಸಮಾಧಿ ದೊರೆತ ನಂತರ ಕೆಲಕೆಲವರು ಕೆಳಕ್ಕೆ ಇಳಿದು ಬಂದು 'ವಿದ್ಯಾ ಅಹಂ', 'ಭಕ್ತಿ ಅಹಂ' ಇಟ್ಟುಕೊಂಡಿರುತ್ತಾರೆ. ಇದು ಸಂತೆ ಮುಗಿದು ಹೋದ ನಂತರವೂ ಕೆಲವರು ತಮ್ಮ ಖುಷಿಯಿಂದ ಸಂತೆಯಲ್ಲಿ ಕುಳಿತಿರುವ ಹಾಗೆ. ಉದಾಹರಣೆಗೆ ನಾರದಾದಿಗಳು. ಇವರು ಲೋಕಶಿಕ್ಷಣಾರ್ಥವಾಗಿ 'ಭಕ್ತ ಅಹಂ' ಇಟ್ಟುಕೊಂಡಿರುತ್ತಾರೆ. ಶಂಕರಾಚಾರ್ಯರು ಇದೇ ಕಾರ್ಯಕ್ಕಾಗಿ 'ವಿದ್ಯಾ ಅಹಂ' ಇಟ್ಟುಕೊಂಡಿದ್ದರು.'' *(ಅಲ್ಲೇ, ಪು. ೧೩೯)*

ಈ ಪ್ರಪಂಚವೇ ಒಂದು ಸಂತೆ ಇದ್ದ ಹಾಗೆ. ಇಲ್ಲಿ ಪುಣ್ಯದ ಲಾಭವೂ ಇದೆ, ಕಷ್ಟರೂಪದ ನಷ್ಟವೂ ಇದೆ. ಸಂತೆಗೆ ಕೆಲವರು ಮಾರುವುದಕ್ಕೂ ಅನೇಕರು ಕೊಳ್ಳುವುದಕ್ಕೂ ಬರುತ್ತಾರೆ. ಇಲ್ಲಿ ನಾವು ಪ್ರಾರಬ್ಧಕರ್ಮವನ್ನು ಮಾರುತ್ತೇವೆ, ಮತ್ತು ಆಗಾಮಿ ಕರ್ಮವನ್ನು ಕೊಳ್ಳುತ್ತೇವೆ. ಮತ್ತೆ ಕೆಲವರು ಸುಮ್ಮನೆ ಮೋಜು ನೋಡುವುದಕ್ಕೂ ಬರುತ್ತಾರೆ — ನಾರದಾದಿಗಳಂತೆ. ಅವರಿಗೆ ಮಾರುವುದಕ್ಕೂ ಏನೂ ಇರುವುದಿಲ್ಲ, ಕೊಳ್ಳುವುದಕ್ಕೂ ಏನೂ ಇರುವುದಿಲ್ಲ. ಗ್ರೀಕ್ ದೇಶದ ಪ್ರಸಿದ್ಧ ತತ್ತ್ವಜ್ಞಾನಿಯಾದ ಸಾಕ್ರೆಟಿಸ್ ಒಮ್ಮೆ ಸೂಪರ್ ಮಾರ್ಕೆಟ್ಟಿಗೆ ಹೋದನಂತೆ. ಸುತ್ತಲೂ ಕಣ್ಣು ಹಾಯಿಸಿ ವೈವಿಧ್ಯಮಯ ವಿವಿಧ ವಸ್ತುಗಳನ್ನು ನೋಡಿ ಅವನು ಉದ್ಗರಿಸಿದನಂತೆ: ''ಆಹ್! ನನಗೆ ಆವಶ್ಯಕತೆಯಿಲ್ಲದ ಎಷ್ಟೊಂದು ವಸ್ತುಗಳಿವೆ!''

ಈಗಿನ ಸಂದರ್ಭದಲ್ಲಿ ಮಾರಾಟ ಮೌಲ್ಯವೇ (Sale-Value) ಪ್ರಧಾನವಾಗಿಬಿಟ್ಟಿದೆ. ಎಲ್ಲವೂ ಮಾರಾಟದ ಸರಕುಗಳಾಗಿವೆ - ಮಾನವನೂ ಸೇರಿದಂತೆ. ಅವನು ಅನೇಕ ಡಿಗ್ರಿಗಳನ್ನು ಪಡೆಯುವುದರ ಮೂಲಕ ತನ್ನ ಮಾರಾಟ ಮೌಲ್ಯವನ್ನು ಹೆಚ್ಚಿಸಿಕೊಂಡು ಸಮಾಜದ ಸಂತೆಯಲ್ಲಿ ತನ್ನನ್ನು ಮಾರಿಕೊಳ್ಳುತ್ತಾನೆ. ಸ್ವಾಮಿ ವಿವೇಕಾನಂದರು ನೊಂದು ನುಡಿಯುತ್ತಾರೆ: ''ನಾವೆಲ್ಲ ವ್ಯಾಪಾರಿಗಳು; ನಾವು ಜೀವನದಲ್ಲಿಯೂ ವ್ಯಾಪಾರಿಗಳು, ಧರ್ಮದ ವಿಷಯದಲ್ಲಿಯೂ ವ್ಯಾಪಾರಿಗಳು: ಅಯ್ಯೋ ನಾವು ಪ್ರೀತಿಯಲ್ಲಿಯೂ ವ್ಯಾಪಾರಿಗಳಾಗಿಬಿಟ್ಟಿದ್ದೇವೆ.''

### ಶುದ್ಧ ಮನಸ್ಸು, ಶುದ್ಧ ಆತ್ಮ ಒಂದೇ

ಶ್ರೀರಾಮಕೃಷ್ಣರು: ''ಮನಸ್ಸಿನಲ್ಲಿ ಪ್ರಪಂಚಾಸಕ್ತಿ ಶೂನ್ಯವಾಗಿಬಿಟ್ಟೊಡನೆಯೇ ಭಗವಂತನ ದರ್ಶನ ದೊರೆತುಬಿಡುತ್ತದೆ. ಶುದ್ಧ ಮನಸ್ಸಿನಲ್ಲಿ ಮೂಡುವುದೆಲ್ಲವೂ ಭಗವಂತನ ವಾಣಿಯೇ. ಯಾವುದು ಶುದ್ಧ ಮನಸ್ಸೋ, ಅದೇ ಶುದ್ಧ ಬುದ್ಧಿ, ಅದೇ ಶುದ್ಧ ಆತ್ಮ. ಏಕೆಂದರೆ ಭಗವಂತನನ್ನು ಹೊರತು ಶುದ್ಧವಾದ ವಸ್ತು ಬೇರೊಂದಿಲ್ಲ. ಆದರೆ ಆತನ ಸಾಕ್ಷಾತ್ಕಾರ ಪಡೆದುಕೊಂಡುಬಿಟ್ಟುದೇ ಆದರೆ, ಧರ್ಮಾಧರ್ಮಗಳಿಗೆ ಅತೀತವಾಗಿಬಿಡಬಹುದು.'' *(ಅಲ್ಲೇ, ಪು. ೧೩೯)*

ಸಂಪೂರ್ಣ ಶುದ್ಧ ಮನಸ್ಸಿನಲ್ಲಿ ಭಗವಂತನನ್ನು ಬಿಟ್ಟು ಇನ್ನೇನೂ ಇರುವುದಿಲ್ಲ. ಉದಾಹರಣೆಗೆ: ಸ್ಫಟಿಕದ ಹತ್ತಿರ ಒಂದು ಹೂವನ್ನು ಇಟ್ಟರೆ ಸ್ಫಟಿಕವು ಹೂವಿನ ಬಣ್ಣವನ್ನು ಸಂಪೂರ್ಣ ಹೀರಿಕೊಂಡು ಆ ಬಣ್ಣವೇ ಆಗಿ ಬಿಡುತ್ತದೆ. ಸ್ಫಟಿಕವು ಕಾಣುವುದೇ ಇಲ್ಲ.

ಅಶುದ್ಧಿ ಎಂದರೆ ತನಗೆ ಸಂಬಂಧಪಡದ ಇನ್ನಾವುದೋ ಅದರೊಡನೆ ಸೇರಿಕೊಂಡಿರುವುದು. ದೇವರಿಗೆ ಸಂಬಂಧಿಸದುದು ಯಾವುದೂ ಇಲ್ಲ. ಆದ್ದರಿಂದ ಅವನು ಸದಾ ಪವಿತ್ರ. ಸೂರ್ಯನಿಗೂ ಕತ್ತಲೆಗೂ ಯಾವ ಸಂಬಂಧವೂ ಇಲ್ಲದಿರುವಂತೆ, ದೇವರಿಗೂ ಅಶುದ್ಧಿಗೂ ಯಾವ ಸಂಬಂಧವೂ ಇಲ್ಲ. ಕತ್ತಲೆ ಎಂದರೇನು ಎಂದು ಸೂರ್ಯನನ್ನು ಕೇಳಿದರೆ, ''ನನಗೆ ತಿಳಿಯದು'' ಎನ್ನುತ್ತಾನಷ್ಟೆ. ಆದ್ದರಿಂದ ಪವಿತ್ರತೆಯೇ ಆಗಿರುವ ದೇವರನ್ನು ನೆನೆದರೆ ನಮ್ಮ ಮನಸ್ಸು ಪವಿತ್ರವಾಗುತ್ತದೆ.

ಭಗವಂತನನ್ನು ಪಡೆದರೆ ಧರ್ಮಾಧರ್ಮಗಳನ್ನೂ ಮೀರಿ ಹೋಗಬಹುದು ಎಂದು ಶ್ರೀರಾಮಕೃಷ್ಣರು ಹೇಳುತ್ತಾರೆ. ಧರ್ಮ ಎಂದರೆ ಕೆಲವು ನೀತಿನಿಯಮಗಳನ್ನು ಪಾಲಿಸುವುದು. ಅಧರ್ಮವೆಂದರೆ ಸ್ವಚ್ಛಂದ ವೃತ್ತಿ. ಜ್ಞಾನಿಗೆ ಯಾವುದೇ ಧರ್ಮದ ಕಟ್ಟುಪಾಡುಗಳೂ ಇರುವುದಿಲ್ಲ; ಸ್ವಚ್ಛಂದ ವೃತ್ತಿಯವನೂ ಆಗಿರುವುದಿಲ್ಲ. ನೀತಿನಿಯಮಾವಳಿಗಳ ಒಳಗೆ ಬೆಳೆದು ಅದನ್ನೂ ಮೀರಿ ಹೋಗಿರುತ್ತಾನೆ, ಅವನು. ಅದಕ್ಕಾಗಿಯೇ ಸ್ವಾಮಿ ವಿವೇಕಾನಂದರು ಹೇಳಿರುವುದು: 'It is good to born in church,

but not to die there' (ಒಂದು ಧಾರ್ಮಿಕ ಸಂಪ್ರದಾಯದೊಳಗೆ ಹುಟ್ಟುವುದು ಒಳ್ಳೆಯದು, ಆದರೆ ಅಲ್ಲಿಯೇ ಸಾಯುವುದು ಒಳ್ಳೆಯದಲ್ಲ.) ತೈತ್ತಿರೀಯ ಉಪನಿಷತ್ತು ಹೇಳುತ್ತದೆ: **ಏತಂ ಹ ವಾವ ನ ತಪತಿ, ಕಿಮಹಂ ಸಾಧು ನಾಕರವಂ, ಕಿಮಹಂ ಪಾಪಮಕರವಮಿತಿ ।** – ''ನಾನು ಒಳ್ಳೆಯದನ್ನು ಏಕೆ ಮಾಡಲಿಲ್ಲ? ನಾನು ಪಾಪವನ್ನು ಏಕೆ ಮಾಡಿದೆನು? ಎಂಬ ಪಶ್ಚಾತ್ತಾಪವು ಇವನನ್ನು ತಪಿಸುವುದಿಲ್ಲ.'' *(೨.೯)* ಏಕೆಂದರೆ ಅವನು ಒಳಿತು-ಕೆಡುಕುಗಳೆರಡನ್ನೂ ಮೀರಿರುತ್ತಾನೆ. ಈ ಸಂದರ್ಭದಲ್ಲಿ ಸ್ವಾಮಿ ವಿವೇಕಾನಂದರ ಇನ್ನೊಂದು ಹೇಳಿಕೆಯನ್ನು ಸ್ಮರಿಸಿಕೊಳ್ಳಬಹುದು: 'The whole history of humanity is a continues fight against the so called laws of nature.' ('ಮಾನವ ಕೋಟಿಯ ಇತಿಹಾಸವೆಂದರೆ ಪ್ರಕೃತಿ ನಿಯಮಗಳ ವಿರುದ್ಧ ನಿರಂತರ ಹೋರಾಟ.')

### ಎರಡು ಮಾರ್ಗಗಳು

**ಶ್ರೀರಾಮಕೃಷ್ಣರು:** ''(ದೇವರನ್ನು ಪಡೆಯುವುದಕ್ಕೆ) ಎರಡು ಮಾರ್ಗಗಳಿವೆ: ವಿಚಾರ ಮಾರ್ಗ ಮತ್ತು ಅನುರಾಗ ಅಥವಾ ಭಕ್ತಿಮಾರ್ಗ. ವಿಚಾರವೆಂದರೆ ಸದಸದ್ವಿಚಾರ. ಏಕಮಾತ್ರ ಸತ್, ಎಂದರೆ ನಿತ್ಯವಸ್ತು ಭಗವಂತ ಮಾತ್ರ. ಉಳಿದುದೆಲ್ಲ ಅಸತ್, ಎಂದರೆ ಅನಿತ್ಯ ವಸ್ತು. ಕೇವಲ ಐಂದ್ರಜಾಲಿಕನೇ ಸತ್ಯ, ಆತನ ಇಂದ್ರಜಾಲ ಮಿಥ್ಯೆ. ಇದಕ್ಕೇ ವಿಚಾರ ಅಂತ ಹೆಸರು.

''ವಿವೇಕ ವೈರಾಗ್ಯ. ಸದಸದ್‌ವಿಚಾರಕ್ಕೆ 'ವಿವೇಕ' ಅಂತ ಹೆಸರು. ವೈರಾಗ್ಯವೆಂದರೆ ಪ್ರಾಪಂಚಿಕ ವಸ್ತುಗಳ ಕಡೆ ವಿರಕ್ತಿ. ಅವು ಒಮ್ಮೆಗೇ ದೊರೆತು ಬಿಡುವುದಿಲ್ಲ – ದಿನವೂ ಅಭ್ಯಾಸ ಮಾಡಬೇಕು....

''ಅಭ್ಯಾಸ ಯೋಗದಿಂದ ಕಾಮಕಾಂಚನಾಸಕ್ತಿಯನ್ನು ತ್ಯಾಗ ಮಾಡಲು ಸಾಧುಗೀತೆಯಲ್ಲಿ ಹೀಗೆ ಹೇಳಿದೆ: ಅಭ್ಯಾಸದಿಂದ ಮನಸ್ಸು ಅಸಾಧಾರಣ ಶಕ್ತಿಯನ್ನು ಗಳಿಸಿಕೊಳ್ಳುತ್ತದೆ. ಆಗ ಇಂದ್ರಿಯ ಸಂಯಮ ಮಾಡಲು, ಕಾಮಕ್ರೋಧಾದಿಗಳನ್ನು ವಶಪಡಿಸಿಕೊಳ್ಳಲು ಕಷ್ಟವಾಗುವುದಿಲ್ಲ. ಅಂಥ ಮನುಷ್ಯ ಆಮೆಯಂತೆ ವರ್ತಿಸುತ್ತಾನೆ. ಆಮೆ ಒಮ್ಮೆ ತನ್ನ ಕೈಕಾಲುಗಳನ್ನು ಒಳಕ್ಕೆ ಸೆಳೆದುಕೊಂಡಿತೆಂದರೆ ಮತ್ತೆ ಅದು ಹೊರಕ್ಕೆ ಬಿಡದು. ಕೊಡಲಿ ತೆಗೆದುಕೊಂಡು ಚೂರುಚೂರು ಮಾಡಿದರೂ ಅದು ಅವನ್ನು ಹೊರಕ್ಕೆ ಬಿಡದು... (ಎರಡನೆಯದು) ಅನುರಾಗ ಅಥವಾ ಭಕ್ತಿ ಮಾರ್ಗ. ವ್ಯಾಕುಲ ಹೃದಯದಿಂದ ಭಗವಂತನಿಗಾಗಿ ನಿರ್ಜನ ಪ್ರದೇಶದಲ್ಲಿ ಏಕಾಂತವಾಗಿ ಅಳು, ದರ್ಶನ ಕೊಡಬೇಕೆಂದು ಪ್ರಾರ್ಥಿಸು.'' *(ಅಲ್ಲೇ, ಪು. ೧೪೧)*

ಸದಸದ್ವಿಚಾರದೊಂದಿಗೆ ಇನ್ನೊಂದು ಬಗೆಯ ವಿಚಾರವನ್ನು ನಾವು ಪರಿಗಣಿಸಬಹುದು – ದೃಗ್-ದೃಶ್ಯ ವಿವೇಕ. ಇದೇ ಹೆಸರಿನ ಒಂದು ಪುಟ್ಟ ಪುಸ್ತಕವು ಈ ಕೆಳಗಿನ ಶ್ಲೋಕದೊಂದಿಗೆ ಪ್ರಾರಂಭವಾಗುತ್ತದೆ:

**ರೂಪಂ ದೃಶ್ಯಂ ಲೋಚನಂ ದೃಕ್ ತದ್ದೃಶ್ಯಂ ದೃಕ್ತು ಮಾನಸಮ್ ।**
**ದೃಶ್ಯಾ ಧೀವೃತ್ತಯಃ ಸಾಕ್ಷೀ ದೃಗೇವ ನ ತು ದೃಶ್ಯತೇ ॥**

''ಹೊರಗಿನ ವಿಷಯ ವಸ್ತುಗಳು ದೃಶ್ಯ ಮತ್ತು ಅವನ್ನು ನೋಡುವ ಕಣ್ಣು ದೃಕ್(ವಿಷಯಿ); ಕಣ್ಣು ಮನಸ್ಸಿಗೆ ದೃಶ್ಯವಾಗುತ್ತದೆ, ಆಗ ಮನಸ್ಸು ದೃಕ್ ಆಗುತ್ತದೆ. ಮನೋವೃತ್ತಿಗಳು ಸಾಕ್ಷೀ ಚೈತನ್ಯಕ್ಕೆ ದೃಶ್ಯವಾಗುತ್ತದೆ, ಆದರೆ ಸಾಕ್ಷೀಚೈತನ್ಯವು ಯಾವಾಗಲೂ ದೃಕ್ ಆಗಿಯೇ ಇರುತ್ತದೆ, ದೃಶ್ಯವಾಗುವುದೇ ಇಲ್ಲ.'' ಈ ವಿಷಯ ಎಲ್ಲ ಇಂದ್ರಿಯಗಳಿಗೂ ಅನ್ವಯಿಸುತ್ತದೆ. ಉದಾಃ ಶಬ್ದವು ಕಿವಿಗೆ ವಿಷಯ ಹಾಗೂ ಕಿವಿ ವಿಷಯಿ. ಕಿವಿ ಮನಸ್ಸಿಗೆ ವಿಷಯವಾಗುತ್ತದೆ, ಅಂದರೆ ಕಿವಿಯನ್ನೂ ಅದಕ್ಕೆ ಸಂಬಂಧಪಟ್ಟ ವಿಷಯಗಳನ್ನೂ ಮನಸ್ಸಿನ ಮೂಲಕ ಕಲ್ಪಿಸಿಕೊಳ್ಳಬಹುದು. ಮನಸ್ಸಿನಲ್ಲೇಳುವ ಎಲ್ಲ ಚಿಂತನೆಗಳನ್ನೂ ದೃಶ್ಯಗಳನ್ನೂ ನಾವು ಸಾಕ್ಷಿಯಾಗಿ ನೋಡಲು ಸಾಧ್ಯ. ಈರೀತಿ ಸಾಕ್ಷಿಯಾಗಿ ನೋಡುವವರು ಯಾರು? ಎಂದು ವಿಚಾರ ಮಾಡುತ್ತ ಹೋದಾಗ ದೇಹೇಂದ್ರಿಯಮನಸ್ಸುಗಳಿಗೆ ಮೀರಿದ ಒಂದು ಸತ್ಯವಿದೆ, ಹಾಗೂ ಆ ಸತ್ಯವೇ ನನ್ನ ನಿಜಸ್ವರೂಪ ಎಂಬುದು ಅರಿವಿಗೆ ಬರುತ್ತದೆ. *(ಮುಂದುವರಿಯುವುದು)*

ಒಬ್ಬ ವ್ಯಕ್ತಿಗೆ ಭಗವಾನ್ ಮಹಾವೀರನ ಮೇಲೆ ಅತ್ಯಂತ ದ್ವೇಷವುಂಟಾಯಿತು. ಮಹಾವೀರನ ಕಠೋರ ತಪಸ್ಸು, ತ್ಯಾಗ, ಅಹಿಂಸೆ ಇವನ್ನೆಲ್ಲ ಅವನು ಬೂಟಾಟಿಕೆ ಎಂದೇ ತಿಳಿದು, ಅದನ್ನೇ ಹೇಳುತ್ತ ಅವನನ್ನು ನಿಂದಿಸುತ್ತಿದ್ದ. ಆದರೆ ಅದರಿಂದ ಮಹಾವೀರನು ಸ್ವಲ್ಪವೂ ವಿಚಲಿತನಾಗುತ್ತಿರಲಿಲ್ಲ. ಕೊನೆಗೂ ಒಂದು ದಿನ ಆ ವ್ಯಕ್ತಿ ಸೋತು ಹೋದ. ಮಹಾವೀರನ ಬಳಿಗೆ ಹೋಗಿ ಕೇಳಿದ: ''ಅಲ್ಲಯ್ಯ ? ನಾನು ನಿಮಗೆ ಅನೇಕ ರೀತಿಯಲ್ಲಿ ತೊಂದರೆ ಕೊಟ್ಟೆ, ಆದರೆ ಅದನ್ನೆಲ್ಲ ನೀವು ಸಹಿಸಿಕೊಂಡಿರಿ. ಇದು ನಿಮಗೆ ಹೇಗೆ ಸಾಧ್ಯವಾಯಿತು?'' ಇದನ್ನು ಕೇಳುತ್ತಲೇ ಮಹಾವೀರನ ಕಣ್ಣುಗಳಿಂದ ನೀರಿಳಿಯತೊಡಗಿತು. ಆಗ ಆಶ್ಚರ್ಯಚಕಿತನಾದ ಆ ವ್ಯಕ್ತಿ ಕೇಳಿದ: '' ಭಗವಾನ್! ನಿಮ್ಮ ಕಣ್ಣುಗಳಿಂದ ನೀರು ಇಳಿಯುತ್ತದೆ, ಏಕೆ?''

ಮಹಾವೀರ ಹೇಳಿದ: ''ಗೆಳೆಯಾ, ನನಗೆ ನೀನು ತುಂಬಾ ತೊಂದರೆ ಕೊಟ್ಟೆ ಎಂದು ನಾನು ಕಣ್ಣೀರು ಸುರಿಸುತ್ತಿಲ್ಲ. ಆದರೆ ನನಗೆ ತೊಂದರೆ ಕೊಡಲು ನೀನು ಇಷ್ಟೊಂದು ಕಷ್ಟ ಅನುಭವಿಸಬೇಕಾಯಿತಲ್ಲಾ.. ಅದನ್ನು ನೆನೆದು ನನಗೆ ಕಣ್ಣಿರು ಬಂತು, ಅಷ್ಟೇ. ನನಗೋಸ್ಕರ ಒಂದು ಅಜ್ಞಾನಿ ಆತ್ಮವು ಕಷ್ಟಪಡುತ್ತಿದೆಯಲ್ಲಾ ಎಂದು ಚಿಂತಿಸಿ ನನಗೆ ದುಃಖವುಂಟಾಗಿದೆ.'' ಆಗ ಆ ವ್ಯಕ್ತಿ ಮಹಾವೀರನ ಕ್ಷಮೆ ಕೇಳಿದ.

*'ಪ್ರೇರಕ ಪ್ರಸಂಗ'ದಿಂದ*